ಕೋರಿರುತ್ತಾರೆ. ಮಾನ್ಯ ಎಸ್ಪಿಪಿರವರು ಮುಂದಿನ ತಾರೀಖಿನ ಒಳಗಾಗಿ ಪೋಲಿಸರಿಂದ ಸದರಿ ಸಿಸಿಟಿವಿ ಫುಟೇಜ್ ನ ನಕಲನ್ನು ಆರೋಪಿ ಪರ ವಕೀಲರಿಗೆ ಕೊಡಿಸುವುದಾಗಿ ತಿಳಿಸಿದ್ದಾರೆ. ಸದರಿ ಸಿಸಿಟಿವಿ ಫುಟೇಜ್ ಮಹತ್ವಪೂರ್ಣ ದಾಖಲಾತಿ ಆಗಿರುವುದರಿಂದ ಹಾಗೂ ನ್ಯಾಯದ ದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ನ ಸಹಿ ಮಾಡಿದ್ದಾರೆ.

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**<u>ಸಾಕ್ಷಿಗೆ ದಿಃ18.02.2025 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಂಎನ್‌ವಿ</u>**

**<u>(ಪ್ರಧಾನ ಕಾನೂನು ಅಭಿರಕ್ಷಕರು) ವಕೀಲರಿಂದಃ</u>**

5. ಹಿಮಾಲಾಯ ಡಾಬಾವು ನನ್ನ ಒಡೆತನದ್ದು ಎಂದು ತೋರಿಸುವ ದಾಖಲಾತಿಗಳನ್ನು ನಾನು ಪೋಲಿಸರಿಗೆ ನೀಡಿಲ್ಲ. ನಾನು ನನ್ನ ಡಾಬಾಗೆ ದಿನನಿತ್ಯಲೂ ಹೋಗುತ್ತೇನೆ. ನಾನು ಡಾಬಾಕ್ಕೆ ಹೋಗುವ ನಿಗದಿತ ಸಮಯ ಇರುವುದಿಲ್ಲ. ನನ್ನ ಡಾಬಾ ಬೆಳಗ್ಗೆ 10.30 ಘಂಟೆಗೆ ತೆರೆಯುತ್ತದೆ ಹಾಗೂ ರಾತ್ರಿ 10.45-11.00 ಘಂಟೆಗೆ ಮುಚ್ಚುತ್ತೇವೆ. ವಾರದ ಏಳು ದಿನಗಳಲ್ಲೂ ಸಹ ನನ್ನ ಡಾಬಾದ ಕೆಲಸದ ಅವಧಿ ಒಂದೇ ಇರುತ್ತದೆ.

6. ನನ್ನ ಡಾಬಾಗೆ ಒಂದು ದಿನಕ್ಕೆ ಅಂದಾಜು 200 ರಿಂದ 300 ಜನ ಊಟಕ್ಕೆ ಬರುತ್ತಾರೆ. ದಿಃ 13.01.2023 ರಂದು ರಾತ್ರಿ 10.50 ರಿಂದ 11.00 ಘಂಟೆ ಸಮಯದಲ್ಲಿ ನನ್ನ ಡಾಬಾದಲ್ಲಿ ಸುಮಾರು 10 ರಿಂದ 20 ಜನ ಗ್ರಾಹಕರು ಇದ್ದಿರಬಹುದು. ಆ ಸಮಯದಲ್ಲಿ ನಮ್ಮ ಡಾಬಾದಲ್ಲಿ ಯಾವುದೇ ಸದ್ದು ಗದ್ದಲ ಇಲ್ಲದೇ ನಿಶ್ಯಬ್ದವಾಗಿತ್ತು. ಸದರಿ ಡಾಬಾದ ವ್ಯಾಪ್ತಿಯೊಳಗೆ ಕಿರುಚಾಡುವ ಶಬ್ದವಾದರೆ ಡಾಬಾದಲ್ಲಿ ಇದ್ದವರಿಗೆ ಕೇಳಿಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಡಾಬಾದ ಮುಂದೆ ಘಟನೆ ಆದ ಸ್ಥಳದಿಂದ ರಸ್ತೆಯು 5 ಅಡಿ ಅಂತರ ಇರುತ್ತದೆ. ಸದರಿ ರಸ್ತೆಯಲ್ಲಿ ಸಾಮಾನ್ಯವಾಗಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಆ ಸಮಯದಲ್ಲಿ ಅಷ್ಟು ವಾಹನ ಸಂಚಾರ ಇರುವುದಿಲ್ಲ ಎಂದು ಹೇಳುತ್ತಾರೆ. ಫ್ರಾಸಾ-2 ಇವರು ಕೆಲಸಕ್ಕೆ ಮಧ್ಯಾಹ್ನ 01.30-02.00 ಘಂಟೆಗೆ ಬರುತ್ತಾರೆ ಹಾಗೂ ಡಾಬಾದಿಂದ ರಾತ್ರಿ 10.30-11.00 ಘಂಟೆಗೆ ಹೋಗುತ್ತಾರೆ. ಫ್ರಾಸಾ-2 ಇವರನ್ನು ಹೊರತುಪಡಿಸಿ ತುಂಬಾ ಜನರು ಕೆಲಸಗಾರರು ನಮ್ಮ ಡಾಬಾದಲ್ಲಿ ಇರುತ್ತಾರೆ. ಸದರಿ ಉಳಿದ ಕೆಲಸಗಾರರು ಹಿಂದಿಯವರಾಗಿದ್ದು ಡಾಬಾದಲ್ಲಿಯೇ ಕೆಲಸ ಮುಗಿದ ನಂತರ ಹಾಲ್ಟ್ ಮಾಡುತ್ತಾರೆ. ಫ್ರಾಸಾ-2 ಇವರು ನನ್ನ ಡಾಬಾದಲ್ಲಿ ಅಡಿಗೆಯವರಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

7. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಃ13.01.2023 ರಂದು ರಾತ್ರಿ ಸುಮಾರು 10.50 - 11.00 ಘಂಟೆ ಸಮಯದಲ್ಲಿ ಫ್ರಾಸಾ-2 ಇವರು ಕೆಲಸ ಮುಗಿಸಿಕೊಂಡು ಮನೆಗೆ ಹೊರಟು ಮೂರು ನಿಮಿಷಗಳಲ್ಲಿ ಮತ್ತೆ ಡಾಬಾಕ್ಕೆ ವಾಪಸ್ಸಾಗಿ ಡಾಬಾದ ಬೋರ್ಡ್ ಮುಂದೆ ಯಾರೋ ಬಿದ್ದು ಹೋಗಿದ್ದಾರೆ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ-2 ಇವರು ಹೇಳಿದ 30 ಸೆಕೆಂಡಿನಲ್ಲಿ ನಾನು ಮತ್ತು ಫ್ರಾಸಾ-2 ಸ್ಥಳಕ್ಕೆ ಹೋದೆವು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಫ್ರಾಸಾ-2 ಮತ್ತು ನಾನು ಗೇಟ್ ಬಳಿ ಹೋಗಿ ನೋಡಿರುವುದಿಲ್ಲ ಹಾಗೂ ಅಲ್ಲಿ ರಕ್ತಸಿಕ್ತವಾಗಿ ಒಬ್ಬ ವ್ಯಕ್ತಿ ಬಿದ್ದಿದ್ದನ್ನು ನಾನು ನೋಡಿರಲಿಲ್ಲ ಎಂದರೆ ಸರಿಯಲ್ಲ.

8. ನಾನು ಪೋಲಿಸರ ಯಾವ ನಂಬರಿಗೆ ಫೋನ್ ಕರೆ ಮಾಡಿದ್ದೆ ಎಂದು ನನಗೆ ಈಗ ನೆನಪಿಲ್ಲ. ಡಾಬಾದಿಂದ ಪೋಲಿಸ್ ಠಾಣೆಯು ಮುಕ್ಕಾಲು ಕಿಮೀ ದೂರದಲ್ಲಿದೆ. ಬೈಕ್ ನಲ್ಲಿ ಡಾಬಾದಿಂದ ಪೋಲಿಸ್ ಠಾಣೆಗೆ ಹೋದರೆ 2 ರಿಂದ 3 ನಿಮಿಷದಲ್ಲಿ ಹೋಗಬಹುದು. ನಾನು ಕರೆ ಮಾಡಿ ಹೇಳಿದಾಗ ಇಬ್ಬರು ಪೋಲಿಸರು ಮಾತ್ರ ಸ್ಥಳಕ್ಕೆ ಬಂದಿದ್ದರು ಬೇರೆ ಯಾರು ಬಂದಿರಲಿಲ್ಲ ನಂತರ ಹೊಯ್ಸಳ ವಾಹನ ಬಂತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಾಲಾವಧಿ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ ಪಾಟೀ ಸವಾಲಿಗೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**ಸಾಕ್ಷಿಗೆ ಮಧ್ಯಾಹ್ನ ಪುನಃ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಂಎನ್‌ವಿ (ಪ್ರಧಾನ ಕಾನೂನು ಅಭಿರಕ್ಷಕರು) ವಕೀಲರಿಂದಃ**

9. ಸಿಸಿಟಿವಿ ಕ್ಯಾಮೇರಾ ಇನ್ಸ್ಟಾಲ್ ಮಾಡಿದ್ದ ಬಿಲ್ಲುಗಳನ್ನು ನಾನು ಪೋಲಿಸರ ಮುಂದೆ ಹಾಜರುಮಾಡಿಲ್ಲ ಏಕೆಂದರೆ ಅವರು ಕೇಳಿರುವುದಿಲ್ಲ. ಸದರಿ ಸಿಸಿಟಿವಿ ಫುಟೇಜ್ ನಿಪಿ-3 ಎಷ್ಟು ನಿಮಿಷಗಳ ವಿಡಿಯೋ ಎಂದು ನನಗೆ ಈಗ ನನಗೆ ನೆನಪಿಲ್ಲ. 2023 ರಲ್ಲಿ ಹಿಮಾಲಯ ಡಾಬಾದಲ್ಲಿ 8 ರಿಂದ 10 ಸಿಸಿಟಿವಿ ಕ್ಯಾಮೇರಾಗಳನ್ನು ಅಳವಡಿಸಿದ್ದೆವು.

ಸದರಿ ಸಿಸಿಟಿವಿ ಕ್ಯಾಮೇರಾಗಳನ್ನು ಕ್ಯಾಶ್ ಕೌಂಟರಿನ ಹತ್ತಿರ ಇರುವ ಡಿವಿಆರ್ ಗೆ ಹಾಗೂ ಮೊಬೈಲ್ ಅಲ್ಲಿ ಕಾಣುವಂತೆ ವ್ಯವಸ್ಥೆ ಮಾಡಿಕೊಂಡಿದ್ದೆವು. ಸಾಮಾನ್ಯವಾಗಿ ಮದ್ಯಪಾನ ಮಾಡಿ ಜನರು ಚಿಕ್ಕಪುಟ್ಟ ಗಲಾಟೆಯನ್ನು ಡಾಬಾದಲ್ಲಿ ಮಾಡುವುದು ಸಾಮಾನ್ಯ ಎಂದರೆ ಸರಿಯಲ್ಲ. ಡಾಬಾದಲ್ಲಿ ಸಣ್ಣ ಪುಟ್ಟ ಜಗಳಗಳು ಆಗಬಹುದು ಎಂದು ಸಿಸಿಟಿವಿ ಕ್ಯಾಮೇರಾವನ್ನು ಡಾಬಾದಲ್ಲಿ ಅಳವಡಿಸಿಕೊಂಡಿರುತ್ತೇವೆ ಎಂದರೆ ಇರಬಹುದು. ಸಾಕ್ಷಿ ಮುಂದುವರಿದು ಸಣ್ಣ ಪುಟ್ಟ ಜಗಳಗಳು ಆಗುವುದನ್ನು ತಪ್ಪಿಸಲು ಸಿಸಿಟಿವಿ ಕ್ಯಾಮೇರಾವನ್ನು ಅಳವಡಿಸಿರುತ್ತೇನೆ. ಸದರಿ ಸಿಸಿಟಿವಿ ಕ್ಯಾಮೇರಾದಲ್ಲಿ ಯಾವ ಯಾವ ದೃಶ್ಯಾವಳಿಗಳು ಕಾಣಿಸುತ್ತದೆ ಎಂದು ನಾನು ಆಗಾಗ್ಗೆ ಕ್ಯಾಶ್ ಕೌಂಟರ್ ನಲ್ಲಿರುವ ಡಿವಿಆರ್ ಟಿವಿಯಲ್ಲಿ ಆಗಾಗ್ಗೆ ನೋಡುತ್ತಿರುತ್ತೇನೆ ಎಂದರೆ ಸರಿ. ಆ ದಿನ ನನಗೆ ಸಿಸಿಟಿವಿ ಫುಟೇಜ್ ಅನ್ನು ಡಿವಿಆರ್ ಟಿವಿಯಲ್ಲಿ ನೋಡಲು ಅಡಚಣೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸಿಸಿಟಿವಿ ಫುಟೇಜ್ ಗಳನ್ನು ಯಾವಾಗಲೂ ನೋಡಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಮೊಬೈಲ್ ಅಲ್ಲಿ ಸಿಸಿಟಿವಿ ಫುಟೇಜ್ ಅನ್ನು ನೋಡಲು ತೊಂದರೆ ಇರಲಿಲ್ಲ. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ ಈಗ ನೋಡಿದ ದೃಶ್ಯಾವಳಿಯಲ್ಲಿ ಡಾಬಾದಿಂದ ಹೊರಗೆ ಹೋಗುತ್ತಿರುವ ದ್ವಿಚಕ್ರ ವಾಹನದ ನಂಬರ್ ಪ್ಲೇಟ್ ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ರೀತಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವವರು ನಮ್ಮ ಡಾಬಾದ ಅಡುಗೆಯವರಾದ ಗಣೇಶ್ ಭಟ್ ಇರುತ್ತಾರೆ ಎಂದು ಹೇಳುತ್ತಾರೆ. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ ಈಗ ನೋಡಿದ ದೃಶ್ಯಾವಳಿಯಲ್ಲಿ ಸಾಕಷ್ಟು ವಾಹನಗಳು ರಸ್ತೆಯಲ್ಲಿ ಹೋಗಿ ಬರುತ್ತಿರುವುದು ಕಾಣಿಸುತ್ತಿದೆ ಎಂದರೆ ಸರಿ. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ ಈಗ ನೋಡಿದ ದೃಶ್ಯಾವಳಿಯಲ್ಲಿ ಘಟನೆ ನಡೆದ ವಿಚಾರ ಸಾರ್ವಜನಿಕರ ಗಮನಕ್ಕೆ ಬಂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಫ್ರಾಸಾ-2 ರವರು ಘಟನೆ ನೋಡಿ ಡಾಬಾಗೆ ವಾಪಸ್ಸು ಬಂದಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ ಈಗ ನೋಡಿದ ದೃಶ್ಯಾವಳಿಯಲ್ಲಿ ನಮ್ಮ ಡಾಬಾದಿಂದ ಅನೇಕ ದ್ವಿಚಕ್ರ ವಾಹನ ಹಾಗೂ ಆಟೋಗಳು ಹೊರಗೆ ಹೋಗುತ್ತಿದ್ದು ಕಾಣುತ್ತಿದ್ದು ಆ ರೀತಿ ಹೋಗುವವರಿಗೂ ಸಹ ಸದರಿ ಘಟನೆ ಗಮನಕ್ಕೆ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸ್ಥಳದ ಹತ್ತಿರ

ಇರುವ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು 3-4 ಹಳ್ಳಿಗಳಿಗೆ ಜನರು ಓಡಾಡುವ ರಸ್ತೆ ಇದೇ ಆಗಿರುವುದರಿಂದ ವಾಹನಗಳ ಸಂಚಾರ ಸಾಕಷ್ಟು ಇರುತ್ತದೆ ಎಂದು ಹೇಳುತ್ತಾರೆ.

10. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ (ಈಗ ನ್ಯಾಯಾಲಯದ ಕಂಪ್ಯೂಟರಿನಲ್ಲಿ ಕಂಡುಬರುವ) ನೋಡಿದ ದೃಶ್ಯಾವಳಿಯಲ್ಲಿ ಯಾರು ಯಾರನ್ನು ಏನು ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ಯಾರು ಎಂದು ಗೊತ್ತಿಲ್ಲ ಆದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಚುಚ್ಚುತ್ತಿದ್ದಾನೆ. ಈ ಪ್ರಕರಣದಲ್ಲಿ ಪ್ರಾಸಾ-2 ಹಾಗೂ ನನ್ನನ್ನು ಹೊರತುಪಡಿಸಿ ಡಾಬಾದ ಬೇರೆ ಯಾವ ಕೆಲಸಗಾರರು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

11. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಂತರ ಇನ್ನೊಬ್ಬ ವ್ಯಕ್ತಿಯು ದಾರಿಯಿಂದ ಬಂದು ಬಿದ್ದನು ಎಂದು ಹೇಳಿದ್ದ ವ್ಯಕ್ತಿ ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೊದಲ್ಲಿ ದೃಶ್ಯಾವಳಿಗಳಲ್ಲಿ ಕಂಡುಬರುತ್ತಿಲ್ಲ ಎಂದರೆ ಸರಿ. ನಾನು ಹೇಳುವಂತೆ ಇನ್ನೊಬ್ಬ ವ್ಯಕ್ತಿ ಅಲ್ಲಿ ಬಂದು ಬಿದ್ದಿದ್ದರೆ ಸಿಸಿಟಿವಿ ಫುಟೇಜ್ ನಲ್ಲಿ ಅದು ಚಿತ್ರೀಕರಣವಾಗುತ್ತಿತ್ತು ಎಂದರೆ ನನಗೆ ಅದನ್ನು ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ.

12. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೋವನ್ನು ಡಿವಿಆರ್ ಇಂದ ವರ್ಗಾವಣೆ ಮಾಡಿ ಪೋಲಿಸರ ಕೋರಿಕೆಯ ಮೇರೆಗೆ ನೀಡಿರುತ್ತೇನೆ. ನಿಪಿ-3 ಸಿಸಿಟಿವಿ ಫುಟೇಜ್ ವಿಡಿಯೋವನ್ನು ನಾನೇ ಸುಳ್ಳು ಸೃಷ್ಟಿ ಮಾಡಿ ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರಕ್ತಸಿಕ್ತವಾದ ವ್ಯಕ್ತಿಯನ್ನು ನಾನು ಡಾಬಾದ ಮುಂದೆ ನೋಡಿಲ್ಲ ಹಾಗೂ ಪೋಲಿಸರನ್ನು ನಾನು ಕರೆಸಿಲ್ಲ ಎಂದರೆ ಸರಿಯಲ್ಲ. ಇನ್ನೊಬ್ಬ ವ್ಯಕ್ತಿಯು ದಾರಿಯಿಂದ ಬಂದು ಬಿದ್ದವನನ್ನು ನಾನು ಸರಿಯಾಗಿ ನೋಡಲಿಲ್ಲ, ನನಗೆ ಚುಚ್ಚಿರುತ್ತಾರೆ ಎಂದು ಇನ್ನೊಬ್ಬ ವ್ಯಕ್ತಿ ಹೇಳುತ್ತಿದ್ದರು, ನಂತರ ಸದರಿ ಇಬ್ಬರು ಗಾಯಾಳುಗಳನ್ನು ಪೋಲಿಸರು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ

ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಡಾಬಾದ ಫುಟೇಜ್ ತಂದು ಕೊಡುವಂತೆ ಪೋಲಿಸರು ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಹಾಜರಾಗಿ ಪೋಲಿಸರಿಗೆ ಯಾವುದೇ ಸಿಸಿಟಿವಿ ಫುಟೇಜ್ ಇರುವ ಪೆನ್ ಡ್ರೈವ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಪೋಲಿಸರ ಒತ್ತಾಯದ ಮೇರೆಗೆ ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು